ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ

ವಾರ್ತಾಪತ್ರ

(ತ್ರೈಮಾಸಿಕ ಪತ್ರಿಕೆ)

ಸಂಪುಟ : ೦೫ (ಖಾಸಗಿ ಪ್ರಸಾರಕ್ಕಾಗಿ ಮಾತ್ರ) ಅಕ್ಟೋಬರ್–ಡಿಸೆಂಬರ್ ೨೦೧೧

ಸಂಚಿಕೆ : ೨೦

ಸಂಪಾದಕರು

ಎಸ್.ವಿ. ಶ್ರೀನಿವಾಸರಾವ್

ಪರಿವಿಡಿ


ವಿಳಾಸ

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ
ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ
ಬಿ.ಎಂ.ಶ್ರೀ. ಕಲಾಭವನ, ೩ನೇ ಮುಖ್ಯರಸ್ತೆ
ನರಸಿಂಹರಾಜ ಕಾಲೋನಿ
ಬೆಂಗಳೂರು – ೧೯
ದೂರವಾಣಿ:
೨೬೬೧೫೮೭೭, ೨೬೬೭೬೭೭೩
ಇಮೇಲ್ :
bmsritrust@gmail.com

ಶಾಖೆ
ಬಿ.ಎಂ.ಶ್ರೀ. ಶತಮಾನೋತ್ಸವ ಭವನ
ಬೆಳ್ಳೂರು, ನಾಗಮಂಗಲ ತಾ|| ಮಂಡ್ಯ ಜಿಲ್ಲೆ.

ಪ್ರೊ. ಎಂ. ಎಚ್. ಕೃಷ್ಣಯ್ಯ

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನದ ಗೌರವಾಧ್ಯಕ್ಷರು



ಜನನ : ೨೧-೭-೧೯೩೭, ಮೈಸೂರು, ತಂದೆ/ತಾಯಿ: ಹುಚ್ಚಯ್ಯ/ಕೆಂಪಮ್ಮ. ಜನಪ್ರಿಯ ಉಪನ್ಯಾಸಕರು. ಒಳ್ಳೆಯ ವಾಗ್ಮಿ. ಸಂಶೋಧನೆ, ವಿಮರ್ಶೆ ಹಾಗೂ ಹಳಗನ್ನಡ ಸಾಹಿತ್ಯದಲ್ಲಿ ಅಪಾರ ಪರಿಶ್ರಮ ಹೊಂದಿರುವ ಶ್ರೀಯುತರು 'ಯುವ ಕರ್ನಾಟಕ', 'ಕರ್ನಾಟಕ ವಾರ್ತೆ' ಪತ್ರಿಕೆಗಳ ಸಂಪಾದಕತ್ವವನ್ನು ಕೆಲವರ್ಷ ಯಶಸ್ವಿಯಾಗಿ ನಿರ್ವಹಿಸಿದ್ದಾರೆ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿ ೩ ವರ್ಷ ಕಾಲ ಅದ್ಭುತ ಸಾಧನೆ ಮಾಡಿ ಇದೀಗ ತಾನೇ ನಿವೃತ್ತರಾಗಿದ್ದಾರೆ.

ಗೌರವಾಧ್ಯಕ್ಷರಾಗಿದ್ದ ನಾಡೋಜ ಡಾ. ಜಿ. ನಾರಾಯಣ ಅವರ ಅಕಾಲಿಕ ಮರಣದಿಂದ ತೆರವಾದ ಸ್ಥಾನಕ್ಕೆ ಕಾರ್ಯಕಾರಿ ಸಮಿತಿಯ ಸರ್ವಾನುಮತದ ನಿರ್ಣಯದ ಮೇರೆಗೆ ಪ್ರೊ. ಎಂ. ಎಚ್. ಕೃಷ್ಣಯ್ಯ ಅವರನ್ನು ಈ ಸ್ಥಾನಕ್ಕೆ ಆಯ್ಕೆ ಮಾಡಲಾಯಿತು. ಶ್ರೀಯುತರು ಪ್ರತಿಷ್ಠಾನದ ಮೇಲಿನ ಗೌರವದಿಂದ ಈ ಸ್ಥಾನವನ್ನು ಅಲಂಕರಿಸಲು ಒಪ್ಪಿಗೆ ನೀಡಿ ದಿನಾಂಕ ೨೫-೧೨-೨೦೧೧ರಂದು ಅಧಿಕಾರ ಸ್ವೀಕರಿಸಿದ್ದಾರೆ.

ಪ್ರಮುಖ ಕೃತಿಗಳು : ಅಜಿತ ಪುರಾಣ ಸಂಗ್ರಹ, ಹಳಗನ್ನಡ ಸಾಹಿತ್ಯ, ಬಿರಿಮೊಗ್ಗು, ಹೊಳಪು–ಝಳಪು (ಕವನ), ರೂಪಶಿಲ್ಪಿ ಬಸವಯ್ಯ(ಲಲಿತಕಲೆ). ಐತಿಹಾಸಿಕ ಕಾದಂಬರಿ–ಒಂದು ಸಮೀಕ್ಷೆ, ಕಲೆಯ ಭಾಷೆ, ಶೃಂಗಾರ ಲಹರಿ, ಕಲೆ ಮತ್ತು ರಸಾಸ್ವಾದನೆ, ಎನ್. ಎಚ್. ಕುಲಕರ್ಣಿ, ಕಾವ್ಯಭಾಷೆ, ನಾಟಕ ಮತ್ತು ಸೌಂದರ್ಯ ಪ್ರಜ್ಞೆ, ಕುವೆಂಪುಸಾಹಿತ್ಯ–ಚಿತ್ರ ಸಂಪುಟ.

ಶ್ರೀಯುತರು ರಾಷ್ಟ್ರಕವಿ ಕುವೆಂಪು ಪ್ರಶಸ್ತಿ; 'ಮಾಸ್ತಿ' ಪ್ರಶಸ್ತಿ; ಕರ್ನಾಟಕ ರಾಜ್ಯ ಪ್ರಶಸ್ತಿ; 'ಸಂಕ್ಷಿಪ್ತ ಕನ್ನಡ ಭಾಷೆಯ ಚರಿತ್ರೆ'ಗೆ 'ರಾಜ್ಯ ಸಾಹಿತ್ಯ ಅಕಾಡೆಮಿ ಪುರಸ್ಕಾರ' ಮುಂತಾದವುಗಳಿಗೆ ಭಾಜನರಾಗಿದ್ದಾರೆ.

ನೂರಾರು ವಿಮರ್ಶ ಲೇಖನಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸಿದ್ದಾರೆ. ಶ್ರೀಯುತರಿಗೆ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ ಹೃತ್ಪೂರ್ವಕ ಅಭಿನಂದನೆ ಸಲ್ಲಿಸುತ್ತಾ, ಹಾರ್ದಿಕ ಶುಭಾಶಯ ಕೋರುತ್ತದೆ.

ಸಂಪಾದಕೀಯ

ಪ್ರೊ. ಎಂ. ಎಚ್. ಕೃಷ್ಣಯ್ಯ ಅವರು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಯಶಸ್ವಿ ಅಧ್ಯಕ್ಷರಾಗಿ ಇತ್ತೀಚೆಗೆ ನಿವೃತ್ತರಾಗಿದ್ದಾರೆ. ಅವರು ನಾಡೋಜ. ಡಾ. ಜಿ. ನಾರಾಯಣ ಅವರ ನಿಧನದ ನಂತರ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ನೂತನ ಗೌರವ ಅಧ್ಯಕ್ಷರಾಗಿ ದಿನಾಂಕ : ೨೫-೧೨-೨೦೧೧ ರಂದು ಅಧಿಕಾರ ವಹಿಸಿಕೊಂಡಿದ್ದಾರೆ. ಇವರಿಗೆ ಪ್ರತಿಷ್ಠಾನ ಗೌರವಪೂರ್ಣ ಅಭಿನಂದನೆಗಳನ್ನು ಸಲ್ಲಿಸುತ್ತಿದೆ ಹಾಗೂ ಶುಭಾಶಯ ಆಶಿಸುತ್ತದೆ. ಅಧಿಕಾರ ವಹಿಸಿಕೊಂಡ ಇವರು ಪ್ರತಿಷ್ಠಾನದ ಕಾರ್ಯಚಟುವಟಿಕೆಗಳಿಗೆ ಹೊಸ ರೂಪ ನೀಡಿ ಹೆಚ್ಚೆಚ್ಚು ವೈವಿಧ್ಯಪೂರ್ಣ ಕಾರ್ಯಕ್ರಮಗಳನ್ನು ನಡೆಸಲು ಯೋಜನೆಗಳನ್ನು ರೂಪಿಸಲು ಉತ್ಸುಕರಾಗಿದ್ದಾರೆ. ಇವನ್ನು ಯಶಸ್ವಿಗೊಳಿಸಲು ಕಾರ್ಯಕಾರಿ ಸಮಿತಿಯು ಬದ್ಧವಾಗಿದೆ. ಪ್ರತಿಷ್ಠಾನದ ಎಲ್ಲಾ ಸದಸ್ಯರೂ ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರುಗಳೂ ಶ್ರೀಯುತರಿಗೆ ಪೂರ್ಣ ಸಹಕಾರ ನೀಡಬೇಕೆಂದು ವಿನಂತಿಸಿಕೊಳ್ಳುತ್ತಿದ್ದೇವೆ.

ಪೂಜ್ಯ ಬಿ.ಎಂ.ಶ್ರೀ. ಬಗ್ಗೆ ರಾಜ್ಯದ ಹಿರಿಯ ಹಾಗೂ ಕಿರಿಯ ಸಾಹಿತಿಗಳು ಹಾಗೂ ಅಭಿಮಾನಿಗಳು ರಚಿಸಿರುವ ಒಂದು ಸಮಗ್ರ ಕವನ ಸಂಪುಟವನ್ನು ಹೊರಡಿಸುವ ಆಶಯವನ್ನು ಹಿಂದಿನ ವಾರ್ತಾಪತ್ರದಲ್ಲಿ (ಜುಲೈ-ಸೆಪ್ಟೆಂಬರ್, ೨೦೧೧) ತಿಳಿಸಿದ್ದೆವು. ಇದಕ್ಕೆ ಆಚಾರ್ಯ ಬಿ.ಎಂ.ಶ್ರೀ. ಅಭಿಮಾನ ವರ್ಗ ಇನ್ನೂ ಸಾಕಷ್ಟು ಸಂಖ್ಯೆಯಲ್ಲಿ ಸ್ಪಂದಿಸಿಲ್ಲವೆಂದು ತಿಳಿಸಲು ಸಂಕೋಚವಾಗುತ್ತಿದೆ. ಈ ಮಹಾನ್ ಪ್ರಾಧ್ಯಾಪಕರ ಬಗ್ಗೆ ಗೌರವ, ಪ್ರೀತಿ, ವಿಶ್ವಾಸ, ಅಭಿಮಾನ ತೋರಿಸುವ ಕವನಗಳನ್ನು ದಯವಿಟ್ಟು ಹಿರಿಯ ಕಿರಿಯ ಸಾಹಿತಿಗಳು, ಅಭಿಮಾನಿಗಳು ಕೂಡಲೆ ಕಳುಹಿಸಿಕೊಟ್ಟು ಪ್ರತಿಷ್ಠಾನದ ಈ ಪ್ರತಿಷ್ಠಿತ ಸಂಪುಟ ಹೊರಬರಲು ಸಹಕರಿಸಿ ಉಪಕರಿಸಬೇಕೆಂದು ಮತ್ತೊಮ್ಮೆ ವಿನಂತಿಸಿಕೊಳ್ಳುತ್ತಿದ್ದೇವೆ.

-ಎಸ್. ವಿ. ಶ್ರೀನಿವಾಸರಾವ್
ಸಂಪಾದಕರು

ಪ್ರತಿಷ್ಠಾನದ ವಾರ್ತೆ

೨೫-೯-೨೦೧೧ ರಂದು ಭಾನುವಾರ ಬೆಳಗ್ಗೆ ೧೦-೦೦ ಗಂಟೆಗೆ ಕರ್ನಾಟಕ ವಚನ ಸಾಹಿತ್ಯ ಅಕಾಡೆಮಿ ಮತ್ತು ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ ಜಂಟಿಯಾಗಿ ನಡೆಸಿದ ಕಾರ್ಯಕ್ರಮದಲ್ಲಿ 'ಸಾಹಿತ್ಯ' ಅಧ್ಯಯನದ ಹೊಸ ಸಾಧ್ಯತೆಗಳ ಬಗ್ಗೆ ವಿಚಾರ ಸಂಕೀರಣ ನಡೆಯಿತು.

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್, ಉಪ ಕುಲಪತಿಗಳು, ಸಂಸ್ಕೃತ ವಿಶ್ವವಿದ್ಯಾಲಯ, ಅವರು ವಿಚಾರ ಸಂಕಿರಣದ ಉದ್ಘಾಟನೆ ನೆರವೇರಿಸಿದರು. ಪ್ರೊ. ಡಿ. ಲಿಂಗಯ್ಯ ಅವರು ಅಧ್ಯಕ್ಷತೆ ವಹಿಸಿದ್ದರು. ಡಾ. ಸುರೇಶ ಪಾಟೀಲ, ಪ್ರಾಧ್ಯಾಪಕರು, ಎ.ಪಿ.ಎಸ್. ಕಾಲೇಜು 'ಆಶಯ ನುಡಿ' ನುಡಿದರು. ಒಂದನೇ ಗೋಷ್ಠಿ ೧೧-೦೦ ಗಂಟೆಗೆ ಪ್ರಾರಂಭವಾಯಿತು. **'ಸಮಕಾಲೀನ ಸಂದರ್ಭದಲ್ಲಿ ದಾಸ ಸಾಹಿತ್ಯದ ಅನುಸಂಧಾನ ಎದುರುಗೊಳ್ಳಬೇಕಾದ ನೆಲೆಗಳು'** ಈ ಬಗ್ಗೆ ಡಾ. ಎಚ್.ಎನ್. ಮುರಳೀಧರ ಅವರು, **'ಹರಿದಾಸ ಸಾಹಿತ್ಯದ ವಿವಿಧ ಧಾರೆಗಳು'** ಬಗ್ಗೆ ಡಾ. ನಾ. ಗೀತಾಚಾರ್ಯ ಪ್ರಬಂಧ ಮಂಡಿಸಿದರು. ಡಾ. ಗೋಕುಲನಾಥ ಅವರು ಅಧ್ಯಕ್ಷತೆ ವಹಿಸಿದ್ದರು. ೨ನೇ ಗೋಷ್ಠಿ ಮಧ್ಯಾಹ್ನ ೧೨-೧೫ಕ್ಕೆ ಪ್ರಾರಂಭವಾಯಿತು. **'ದಾಸ ಸಾಹಿತ್ಯದ ಪೌರಾಣಿಕ ನೆಲೆಕಟ್ಟು: ಒಂದು ವಿಶ್ಲೇಷಣೆ'** ಬಗ್ಗೆ ಡಾ. ಕೃಷ್ಣಕಟ್ಟಿ ಅವರು, **'ದಾಸ ಸಾಹಿತ್ಯ ಮತ್ತು ಜನಪದ ಸಾಹಿತ್ಯ: ಪರಸ್ಪರ ಪ್ರಭಾವ'** ಬಗ್ಗೆ ಡಾ. ಕುಡ್ಲೂರು ವೆಂಕಟಪ್ಪ ಅವರು ಪ್ರಬಂಧ ಮಂಡಿಸಿದರು ಡಾ. ವಿಷ್ಣುನಾರಾಯಣ ಭಟ್ ಅಧ್ಯಕ್ಷತೆ ವಹಿಸಿದ್ದರು.

ಮಧ್ಯಾಹ್ನ ೨-೩೦ಕ್ಕೆ ಸಮಾರೋಪ ಸಮಾರಂಭ ಪ್ರಾರಂಭವಾಯಿತು, ಶ್ರೀ ಹರಿದಾಸ ಸಂಘದ ಯುವ ಕಲಾವಿದರಿಂದ ದಾಸ ಸಾಹಿತ್ಯದ ಬಗ್ಗೆ ನೃತ್ಯರೂಪಕ ಮತ್ತು 'ಎಲ್ಲಿರುವನೋ ರಂಗ' ನೃತ್ಯ ಪ್ರದರ್ಶನ ಕುಮಾರಿ ರಂಗಶ್ರೀ ಅವರಿಂದ ಜರುಗಿತು.

ಡಾ. ಬಿ. ವಿ. ಮಹೀದಾಸ, ಜಂಟಿ ನಿರ್ದೇಶಕರು, ನವ ಶಿಕ್ಷಣ ಅಭಿಮಾನ, ಬೆಂಗಳೂರು ಅವರು ಸಮಾರೋಪ ಭಾಷಣ ಮಾಡಿದರು. ಶ್ರೀ ಎಲ್ಲೇಗೌಡ ಬೆಸಗರಹಳ್ಳಿ, ಅಧ್ಯಕ್ಷರು ಕರ್ನಾಟಕ ವಚನ ಸಾಹಿತ್ಯ ಅಕಾಡೆಮಿ, ಅಧ್ಯಕ್ಷತೆ ವಹಿಸಿದ್ದರು.



ಡಾ|| ಎಂ. ಎ. ಜಯಚಂದ್ರ ದತ್ತಿ ಮತ್ತು ಡಾ|| ಆ. ನೇ. ಉಪಾಧ್ಯೆ ದತ್ತಿ ೧೫-೧೦-೨೦೧೧

ಡಾ. ಎಂ. ಎ. ಜಯಚಂದ್ರ ದತ್ತಿ ಮತ್ತು ಡಾ. ಆ. ನೇ. ಉಪಾಧ್ಯೆ ದತ್ತಿ ಹಾಗೂ ಸಿರಿಸಂಗೀತ ಕಾರ್ಯಕ್ರಮವನ್ನು ದಿನಾಂಕ ೧೫-೧೦-೨೦೧೧ನೇ ಶನಿವಾರ ಸಂಜೆ ೫-೩೦ಕ್ಕೆ ಏರ್ಪಡಿಸಲಾಗಿತ್ತು. ಡಾ. ಎಂ. ಎ. ಜಯಚಂದ್ರ ದತ್ತಿ ಉಪನ್ಯಾಸ ಕಾರ್ಯಕ್ರಮದಡಿ **'ಜೈನ ಧರ್ಮದಲ್ಲಿ ವ್ಯಕ್ತಿತ್ವ ವಿಕಾಸ'** ಬಗ್ಗೆ ಡಾ. ಪದ್ಮಾಶೇಖರ್ ಅವರು, **ಡಾ. ಆ. ನೇ. ಉಪಾಧ್ಯೆ ದತ್ತಿ ಉಪನ್ಯಾಸದಡಿ 'ಆ. ನೇ. ಉಪಾಧ್ಯೆಯವರ ಸಾಧನೆ'** ಬಗ್ಗೆ ಡಾ. ಎನ್ ಸುರೇಶ್‌ಕುಮಾರ್ ಅವರು ಪ್ರಬಂಧಗಳನ್ನು ಮಂಡಿಸಿದರು. ಪ್ರೊ. ಡಿ. ಲಿಂಗಯ್ಯ ಅಧ್ಯಕ್ಷತೆ ವಹಿಸಿದ್ದರು.


ವಿದುಷಿ ಸುಕನ್ಯ ವಿಜಯಕುಮಾರ್ ಅವರು ದಾಸರ ಕೀರ್ತನೆಗಳನ್ನು ಪ್ರಸ್ತುತಪಡಿಸಿದರು. ವಿದ್ವಾಂಸರುಗಳಾದ ಶ್ರೀ ಆರ್. ನಾಗರಾಜ್ ಮೃದಂಗ, ಶ್ರೀ. ಪಿ. ಎಸ್. ರಾಘವೇಂದ್ರ ವೈಲಿನ್, ಸಹಯೋಗ ನೀಡಿದರು. ಕಾರ್ಯಕ್ರಮದ ಪ್ರಾರಂಭದಲ್ಲಿ ಶ್ರೀ ಎಸ್. ವಿ. ಶ್ರೀನಿವಾಸರಾವ್ ಅತಿಥಿಗಳ ಪರಿಚಯ ಮಾಡಿಸಿ ಸ್ವಾಗತಿಸಿದರು. 'ಸಿರಿಸಂಗೀತ' ಕಾರ್ಯಕ್ರಮಕ್ಕೆ ಶ್ರೀಮತಿ ರಮಾದೇವಿ ವಿಶ್ವೇಶ್ವರಯ್ಯ ಚಾಲನೆ ನೀಡಿದರು. ಡಾ. ನಾ.ಗೀತಾಚಾರ್ಯ ಕಾರ್ಯಕ್ರಮ ನಿರೂಪಿಸಿದರು. ಶ್ರೀ ಎಂ.ಎಸ್. ರಾಮಪ್ರಸಾದ್ ವಂದನಾರ್ಪಣೆ ಮಾಡಿದರು.

ದಿನಾಂಕ ೧೬-೧೦-೨೦೧೧ರಂದು ಭಾನುವಾರ ಬೆಳಿಗ್ಗೆ ೧೦-೦೦ಕ್ಕೆ ೨೨ನೇ ಹಸ್ತಪ್ರತಿ ತಂಡದ ಉದ್ಘಾಟನೆ, ೨೧ನೇ ತಂಡದ ಹಸ್ತಪ್ರತಿ ಮತ್ತು ೧೦ನೇ ಹಳಗನ್ನಡ ತರಗತಿ ವಿದ್ಯಾರ್ಥಿಗಳಿಗೆ ಅರ್ಹತಾ ಪತ್ರ ವಿತರಣೆ ಸಮಾರಂಭ ಏರ್ಪಡಿಸಲಾಗಿತ್ತು. ತರಗತಿ ಉದ್ಘಾಟನೆಯನ್ನು ಡಾ. ಕೆ. ಆರ್. ಗಣೇಶ್ ಅವರು ನೆರವೇರಿಸಿ

ಹಸ್ತಪ್ರತಿಗಳ ಪ್ರಾಮುಖ್ಯತೆಯನ್ನು ವಿವರಿಸಿ ಸಂರಕ್ಷಣೆ ಮತ್ತು ಸಂಪಾದನೆಯ ಅವಶ್ಯಕತೆಯನ್ನು ವಿವರಿಸಿದರು. ಡಾ. ದೇವರಕೊಂಡಾರೆಡ್ಡಿ, ಇತಿಹಾಸ ಅಕಾಡೆಮಿಯ ಅಧ್ಯಕ್ಷರು, ಹಂಪೆ ವಿಶ್ವವಿದ್ಯಾನಿಲಯದಲ್ಲಿನ ಖ್ಯಾತ ಇತಿಹಾಸ ಹಾಗೂ ಜಾನಪದ ತಜ್ಞರು, ವಿದ್ಯಾರ್ಥಿ ಗಳಿಗೆ ಅರ್ಹತಾಪತ್ರ ವಿತರಿಸಿದರು. ಪ್ರತಿಷ್ಠಾನದ ಅಧ್ಯಕ್ಷರಾದ ಪ್ರೊ. ಡಿ. ಲಿಂಗಯ್ಯ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಪ್ರಾರಂಭದಲ್ಲಿ ಡಾ. ನಾ. ಗೀತಾಚಾರ್ಯ ಪ್ರಾಸ್ತಾವಿಕ ಭಾಷಣ ಮಾಡಿದರು. ಡಾ. ವಿಜಯಾ ಸುಬ್ಬರಾಜ್ ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿದರು. ಕೊನೆಯಲ್ಲಿ ವಂದನಾರ್ಪಣೆ ಮಾಡಿದರು.

೧೭-೧೦-೨೦೧೧ ಸೋಮವಾರ ಸಂಜೆ ೫-೩೦ಕ್ಕೆ ಟಿ. ಎನ್. ಮಹದೇವಯ್ಯ ದತ್ತಿ ಮತ್ತು ಆಸ್ಥಾನ ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ ದತ್ತಿ ಕಾರ್ಯಕ್ರಮ ಹಾಗೂ 'ಸಿರಿಸಂಗೀತ' ಕಾರ್ಯಕ್ರಮಗಳು ಜರುಗಿದವು.

ಟಿ. ಎಸ್. ಮಹದೇವಯ್ಯ ದತ್ತಿ ಉಪನ್ಯಾಸದಡಿ **ಟಿ. ಎನ್. ಮಹದೇವಯ್ಯ ಅವರ ಬರಹಗಳಲ್ಲಿ ಸಾಂಸ್ಕೃತಿಕ ಚಿತ್ರಣ ಕುರಿತು** ವಿದ್ವಾನ್ ಹೀ. ಚಿ. ಶಾಂತವೀರಯ್ಯ ಅವರು; ಆಸ್ಥಾನ ವಿದ್ವಾನ್ ಎಂ.ಜಿ. ನಂಜುಂಡಾರಾಧ್ಯ ದತ್ತಿ ಉಪನ್ಯಾಸದ ಅಂಗವಾಗಿ **ವಿದ್ವಾನ್ ನಂಜುಂಡಾರಾಧ್ಯರ ಬದುಕು-ಬರಹ** ಕುರಿತು ಡಾ. ಎಂ. ಜಿ. ನಾಗರಾಜ್ ಪ್ರಬಂಧ



ಎಂ. ಜಿ. ನಂಜುಂಡರಾಧ್ಯ ದತ್ತಿ ಮತ್ತು ಮಹದೇವಯ್ಯ ದತ್ತಿ ಕಾರ್ಯಕ್ರಮಗಳು ೧೭-೧೦-೨೦೧೧

ಮಂಡಿಸಿದರು. ಪ್ರತಿಷ್ಠಾನದ ಅಧ್ಯಕ್ಷ ಪ್ರೊ. ಡಿ. ಲಿಂಗಯ್ಯ ಅಧ್ಯಕ್ಷತೆ ವಹಿಸಿದ್ದರು. ಸಂಗೀತ ವಿದುಷಿ ರಾಜಾಮಣಿ ಅವರು ವಚನ ಗಾಯನ ಪ್ರಸ್ತುತಪಡಿಸಿದರು. ಮೃದಂಗದಲ್ಲಿ ವಿದ್ವಾನ್ ಆರ್. ನಾಗರಾಜ್, ವೈಲಿನ್‌ನಲ್ಲಿ ವಿದ್ವಾನ್ ಟಿ. ಕೆ. ದ್ವಾರಕಾನಾಥ್ ಸಹಯೋಗ ನೀಡಿದರು. ಪ್ರಾರಂಭದಲ್ಲಿ ಶ್ರೀ ಎಸ್. ವಿ. ಶ್ರೀನಿವಾಸರಾವ್ ಅವರು ಎಲ್ಲರನ್ನೂ ಸ್ವಾಗತಿಸಿ, ಅತಿಥಿಗಳ ಪರಿಚಯ ಮಾಡಿಸಿದರು. ಶ್ರೀಮತಿ ರಮಾದೇವಿ ವಿಶ್ವೇಶ್ವರಯ್ಯ ಅವರು ಪ್ರಾರ್ಥನೆ ಮಾಡಿದರು. ಡಾ. ನಾ. ಗೀತಾಚಾರ್ಯ ಕಾರ್ಯಕ್ರಮ ನಿರೂಪಿಸಿದರು. ಶ್ರೀ ಎಂ. ಎಸ್. ರಾಮಪ್ರಸಾದ್ ವಂದನಾರ್ಪಣೆ ಸಲ್ಲಿಸಿದರು.

೧೩-೧೧-೨೦೧೧ ರಂದು ಶಂಬಾ ಜೋಶಿ ದತ್ತಿ ಕಾರ್ಯಕ್ರಮ ಸಂಜೆ ೫-೩೦ ಗಂಟೆಗೆ ಕಾರ್ಯಕ್ರಮ ಏರ್ಪಡಿಸಲಾಗಿತ್ತು. **'ಶಂಬಾ ಜೋಶಿ ಅವರ ಬದುಕಿನ ಅನನ್ಯತೆಗಳು'** ಬಗ್ಗೆ ಬೆಳಗಾಂನ ಖ್ಯಾತ ಸಾಹಿತಿ ಪ್ರೊ. ಜ್ಯೋತಿ ಹೊಸೂರ



ಡಾ॥ ಶಂಬಾ ಜೋಶಿ ದತ್ತಿ ಕಾರ್ಯಕ್ರಮ ೧೩-೧೧-೨೦೧೧

ಅವರು ಉಪನ್ಯಾಸ ಮಾಡಿ ಜೋಶಿಯವರ ಬದುಕಿನ ಅನನ್ಯತೆಗಳನ್ನು ಸೋದಾಹರಣವಾಗಿ ವಿವರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರೊ. ಡಿ. ಲಿಂಗಯ್ಯ ಅವರು ವಹಿಸಿದ್ದರು. ಪ್ರಾರಂಭದಲ್ಲಿ ಶ್ರೀ ಎಸ್. ವಿ. ಶ್ರೀನಿವಾಸರಾವ್ ಅತಿಥಿಗಳ ಪರಿಚಯ ಮಾಡಿಸಿ, ಸರ್ವರನ್ನೂ ಸ್ವಾಗತಿಸಿದರು. ಡಾ. ನಾ. ಗೀತಾಚಾರ್ಯ ಕಾರ್ಯಕ್ರಮ ನಿರ್ವಹಿಸಿದರು. ಶ್ರೀ ರಾಮಪ್ರಸಾದ್ ವಂದನಾರ್ಪಣೆ ಮಾಡಿದರು.

೨೬-೧೧-೨೦೧೧ ಶನಿವಾರ ಸಂಜೆ ೬-೦೦ ಗಂಟೆಗೆ 'ಸಿರಿಕಂಟ' ವೇದಿಕೆಯಡಿ ತಿಂಗಳ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಶ್ರೀ ವೇಮಗಲ್ ಸೋಮಶೇಖರ್ ಅವರು **ಬೆಂಗಳೂರಿನಲ್ಲಿ ರವೀಂದ್ರನಾಥ ಠಾಗೂರರು** ಬಗ್ಗೆ ಉಪನ್ಯಾಸ ಮಾಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರೊ. ಡಿ. ಲಿಂಗಯ್ಯ ಅವರು ವಹಿಸಿದ್ದರು. ಪ್ರಾರಂಭದಲ್ಲಿ 'ಸಿರಿಕಂಟ' ವೇದಿಕೆಯ ಚಟುವಟಿಕೆಗಳ ಬಗ್ಗೆ ಡಾ. ನಾ. ಗೀತಾಚಾರ್ಯ ವಿವರಗಳನ್ನು ಪ್ರಾಸ್ತಾವಿಕ ಭಾಷಣದಲ್ಲಿ ತಿಸಿದರು. ಡಾ. ಶ್ಯಾಮಲಾ ರತ್ನಕುಮಾರಿ ಮತ್ತು ಸುಕಂ. ಗೋವರ್ಧನ್ ಅವರು ಸ್ವಾಗತ ಹಾಗೂ ವಂದನಾರ್ಪಣೆ ಸಲ್ಲಿಸಿದರು.

೩೦-೧೧-೨೦೧೧ ಬುಧವಾರ ಸಂಜೆ ೬-೦೦ ಗಂಟೆಗೆ ದಿವಂಗತ ಡಾ. ಜಿ. ನಾರಾಯಣ ಅವರ ಶ್ರದ್ಧಾಂಜಲಿ

ಕಾರ್ಯಕ್ರಮವನ್ನು ಕರ್ನಾಟಕ ಗಮಕ ಕಲಾ ಪರಿಷತ್ತು ಮತ್ತು ಬಿ.ಎಂ.ಶ್ರೀ. ಪ್ರತಿಷ್ಠಾನ ಜಂಟಿಯಾಗಿ ಏರ್ಪಡಿಸಲಾಗಿತ್ತು. ಕಾರ್ಯಕ್ರಮದಲ್ಲಿ ಹಿರಿಯರಾದ ಪ್ರೊ. ಎಲ್. ಎಸ್. ಶೇಷಗಿರಿರಾವ್, ಡಾ. ಎಂ. ಚಿದಾನಂದಮೂರ್ತಿ, ಶ್ರೀಮತಿ ಬಿ. ಟಿ. ಲಲಿತಾ ನಾಯಕ್, ಶ್ರೀ ಎಂ. ಆರ್ ಸತ್ಯನಾರಾಯಣ ಭಾಗವಹಿಸಿ ದಿವಂಗತ ಡಾ. ನಾರಾಯಣ ಅವರ ಗುಣಗಾನ ಮಾಡಿ ಸ್ವಂತ ಪರಿಚಯದ ವಿಶೇಷಾಂಶಗಳನ್ನು ಹಂಚಿಕೊಂಡು ಗೌರವಪೂರ್ಣ ಶ್ರದ್ಧಾಂಜಲಿ ಅರ್ಪಿಸಿದರು.



ದಿ|| ಜಿ. ನಾರಾಯಣರವರ ಶ್ರದ್ಧಾಂಜಲಿ ಕಾರ್ಯಕ್ರಮ ೩೦-೧೧-೧೧

ಪ್ರತಿಷ್ಠಾನದ ಅಧ್ಯಕ್ಷರಾದ ಪ್ರೊ. ಡಿ. ಲಿಂಗಯ್ಯ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ, ಗೌರವಾಧ್ಯಕ್ಷರಾಗಿದ್ದ ನಾಡೋಜ ಜಿ. ನಾರಾಯಣ ಅವರು ಪ್ರತಿಷ್ಠಾನದೊಡನೆ ಇರಿಸಿಕೊಂಡಿದ್ದ ಸುದೀರ್ಘ ಸಂಬಂಧವನ್ನು ಶ್ಲಾಘಿಸಿ, ಅವರ ಕೊಡುಗೆಗಳನ್ನು ಕೊಂಡಾಡಿದರು. ಗಮಕ ಕಲಾ ಪರಿಷತ್ತಿನ ಉಪಾಧ್ಯಕ್ಷ ಶ್ರೀ ಟೆಕ್ಕೆಕೆರೆ ಸುಬ್ರಹ್ಮಣ್ಯ ಭಟ್ಟ ಅವರು ಎಲ್ಲರನ್ನೂ ಸ್ವಾಗತಿಸಿದರು ಎಸ್. ವಿ. ಶ್ರೀನಿವಾಸರಾವ್ ಅತಿಥಿಗಳ ಪರಿಚಯ ಮಾಡಿಕೊಟ್ಟರು. ಡಾ. ನಾ. ಗೀತಾಚಾರ್ಯರು ಕಾರ್ಯಕ್ರಮ ನಿರೂಪಸಿದರು. ವಂದನಾರ್ಪಣೆ ಮಾಡಿದರು.

೧೭-೧೨-೨೦೧೧ ಶನಿವಾರ ಸಂಜೆ ೫-೩೦ ಗಂಟೆಗೆ ದಿ|| ಸಾರಂಗಿ ವೆಂಕಟರಾಮಯ್ಯ-ಪುಟ್ಟಚ್ಚಮ್ಮ ದತ್ತಿ ನಿಧಿ ಕಾರ್ಯಕ್ರಮ ನಡೆಯಿತು. ಈ ಕಾರ್ಯಕ್ರಮದ ಉದ್ಘಾಟನೆಯನ್ನು ಗೌ|| ಅಧ್ಯಕ್ಷರಾದ ಪ್ರೊ. ಎಂ. ಎಚ್. ಕೃಷ್ಣಯ್ಯ ನಡೆಸಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಖ್ಯಾತ ಸಾಹಿತಿ ಡಾ. ಸಾ. ಶಿ. ಮರುಳಯ್ಯ ಅವರು ಕಾದಂಬರಿ ಸ್ಪರ್ಧೆಯ ವಿಜೇತರಾದ ಶ್ರೀ ಕೆ. ನಾಗರಾಜರಾವ್ (ಕೃತಿ : ನನ್ನ ದೃಷ್ಟಿಯಲ್ಲಿ ಕೃಷ್ಣ) ಅವರಿಗೆ ಪ್ರಶಸ್ತಿ ಪ್ರದಾನ ಮಾಡಿದರು. ವೇದಿಕೆಯ ಮೇಲಿದ್ದ ಅತಿಥಿಗಳು ಪ್ರಶಸ್ತಿ



ದಿ|| ಸಾರಂಗಿ ವೆಂಕಟರಾಮಯ್ಯ-ಪುಟ್ಟಚ್ಚಮ್ಮ ದತ್ತಿ ನಿಧಿ ಕಾರ್ಯಕ್ರಮ ೧೭-೧೨-೨೦೧೨

ವಿಜೇತ ಶ್ರೀ ನಾಗರಾಜರಾವ್ ಅವರಿಗೆ ಶಾಲು ಹೊದಿಸಿ ಫಲಪುಷ್ಪ ನೀಡಿ, ಸನ್ಮಾನಿಸಿದರು. ಪ್ರಾರಂಭದಲ್ಲಿ ದತ್ತಿ ದಾನಿ ಶ್ರೀ ಎಸ್. ವಿ. ಶ್ರೀನಿವಾಸರಾವ್ ಅವರು ಅವರ ತಂದೆ/ತಾಯಿ ಹೆಸರಿನಲ್ಲಿ ಸ್ಥಾಪಿಸಿರುವ ದತ್ತಿ ಬಗ್ಗೆ ಭಾವಪೂರ್ಣ ಪ್ರಸ್ತಾವಿಕ ಭಾಷಣ ಮಾಡಿ, ಅನಿಸಿಕೆಗಳನ್ನು ಹಂಚಿಕೊಂಡು, ಸರ್ವರನ್ನು ಸ್ವಾಗತಿಸಿದರು. ಡಾ. ನಾ. ಗೀತಾಚಾರ್ಯ ಕಾರ್ಯಕ್ರಮ ನಿರೂಪಿಸಿದರು. ಶ್ರೀ ಎಂ.ಎಸ್. ರಾಮ ಪ್ರಸಾದ್ ವಂದನಾರ್ಪಣೆ ಮಾಡಿದರು. ಪ್ರೊ. ಡಿ. ಲಿಂಗಯ್ಯ ಅಧ್ಯಕ್ಷತೆ ವಹಿಸಿದ್ದರು. ಡಾ. ಸಂಧ್ಯಾ ರೆಡ್ಡಿಯವರು ಪ್ರಶಸ್ತಿ ಪಡೆದ ಕೃತಿಯ ವೈಶಿಷ್ಟ್ಯ ವಿವರಿಸಿದರು.

ಆತ್ಮೀಯರೆ,

ಬಿ.ಎಂ.ಶ್ರೀ ಪ್ರತಿಷ್ಠಾನ ಎಂ.ವಿ.ಸೀ. ಶತಮಾನೋತ್ಸವವನ್ನು 'ಹಸ್ತಪ್ರತಿ ಅಧ್ಯಯನ ವರ್ಷ'ವೆಂದು ಘೋಷಿಸಿ ರಾಜ್ಯಾದ್ಯಂತ ಕಾರ್ಯಕ್ರಮಗಳನ್ನು ಸಂಘಟಿಸಿ ನೂತನ ಆವಿಷ್ಕಾರವಾದ 'ಹಸ್ತಪ್ರತಿ ಅಧ್ಯಯನ ಶಾಸ್ತ್ರ' ಮತ್ತು ಪ್ರಾಚೀನ ಹಸ್ತಪ್ರತಿಗಳ ಸಂರಕ್ಷಣೆಯ ಜಾಗೃತಿ ಕಾರ್ಯಕ್ರಮಗಳನ್ನು ನಡೆಸಿ ಈ ಶತಮಾನೋತ್ಸವ ವರ್ಷದಿಂದ ಹಸ್ತಪ್ರತಿ ಅಧ್ಯಯನ ಸಮಾವೇಶ ನಡೆಸುತ್ತಿರುವುದು ಸರಿಯಷ್ಟೆ

ಪ್ರಥಮ ಹಸ್ತಪ್ರತಿ ಸಮಾವೇಶವು ಕಳೆದ ವರ್ಷ ಧರ್ಮಸ್ಥಳದಲ್ಲಿ ನಡೆದಿದ್ದು **ಇದೀಗ ದ್ವಿತೀಯ ಸಮಾವೇಶವನ್ನು ಶಿವಮೊಗ್ಗ ಜಿಲ್ಲೆಯ ರಾಮಚಂದ್ರಪುರ ಮಠದಲ್ಲಿ ಬರುವ ಮಾರ್ಚ್‌ನಲ್ಲಿ ನಡೆಸಲು ಉದ್ದೇಶಿಸಲಾಗಿದೆ.** ಇದು ಮುಕ್ತ ಚರ್ಚಾ ವೇದಿಕೆಯಾಗಿದ್ದು ಹಸ್ತಪ್ರತಿ ಕ್ಷೇತ್ರದ ಆಸಕ್ತರೆಲ್ಲರೂ ಭಾಗವಹಿಸಬಹುದಾಗಿದೆ. ಬೆಳಿಗ್ಗೆ ಉದ್ಘಾಟನೆಯಾದ ನಂತರ ಸಂಜೆಯವರೆಗೆ ಸುಮಾರು 50 ಕಿರುಪ್ರಬಂಧಗಳಾದರೂ ಇರಬೇಕಾಗುತ್ತದೆ. ತಾವುಗಳೆಲ್ಲ ತಪ್ಪದೆ ಹಸ್ತಪ್ರತಿಯ ಬಗ್ಗೆ ಒಂದೊಂದು ಕಿರುಪ್ರಬಂಧವನ್ನು ಮಂಡಿಸಲು ಕೋರಿದೆ.

ಪ್ರಬಂಧ ಮಂಡಿಸಲು ಆಸಕ್ತಿಯಿರುವವರು ಪ್ರತಿಷ್ಠಾನದ ವಿಳಾಸಕ್ಕೆ ತಮ್ಮ ಪ್ರಬಂಧದ ಕಿರುಟಿಪ್ಪಣಿಯನ್ನು ಕೂಡಲೇ ಕಳುಹಿಸಬೇಕಾಗಿ ವಿನಂತಿ.

ಹಸ್ತಪ್ರತಿ ಸಮಾವೇಶದಲ್ಲಿ ಮಂಡಿಸುವ ಪ್ರಬಂಧ ಈ ಕೆಳಕಂಡ ಕ್ಷೇತ್ರಗಳಿಗೆ ಸಂಬಂಧಿಸಿರಬೇಕು

1. ನಿಮಗೆ ದೊರೆತಿರುವ ಪ್ರಾಚೀನ ಹಸ್ತಪ್ರತಿಯ ವಿಚಾರ.
2. ನಿಮಗೆ ಗೊತ್ತಿರುವ ಹಸ್ತಪ್ರತಿ ಉಳ್ಳವರ ಬಗೆಗೆ ಮಾಹಿತಿ.
3. ಪ್ರಾಚೀನ ಹಸ್ತಪ್ರತಿಗಳ ಬಗೆಗೆ ಕ್ಷೇತ್ರಕಾರ್ಯದಿಂದ ಲಭ್ಯವಾದ ವಿವರ.
4. ಹಸ್ತಪ್ರತಿಗಳ ಬಗೆಗೆ ನಿಮಗೆ ತಿಳಿದಿರುವ ಐತಿಹ್ಯಗಳು, ನಂಬಿಕೆಗಳು, ಆಚರಣೆಗಳು (ನಿರ್ದಿಷ್ಟ ನಿದರ್ಶನಗಳೊಂದಿಗೆ)
5. ಹಸ್ತಪ್ರತಿಯ ಸಾಮಗ್ರಿ (ಓಲೆಗರಿ-ಕಾಗದ-ಕಡತ-ಬಟ್ಟೆ, ಇತ್ಯಾದಿ ಲೇಖನ ಸಾಮಗ್ರಿ, (ಬರೆಯುವ ಕಂಟ, ಮಸಿ, ಇತ್ಯಾದಿ ಸಂರಕ್ಷಣ ಸಾಮಗ್ರಿ (ಹಸ್ತಪ್ರತಿ ಕಟ್ಟು, ರಟ್ಟು, ಪೆಟ್ಟಿಗೆ, ಹಲಗೆ, ಇತ್ಯಾದಿ ಇವುಗಳ ವೈಶಿಷ್ಟ್ಯದ ಬಗೆಗೆ ಕಲೆಗಾರಿಕೆ ಬಗೆಗೆ ಮಾಹಿತಿ, ವೈಜ್ಞಾನಿಕ ವಿಶ್ಲೇಷಣೆ.
6. ಹಸ್ತಪ್ರತಿಗಳ ಲಿಪಿ, ಚಿತ್ರಗಳ ವಿವರಣೆ.
7. ಹಸ್ತಪ್ರತಿಗಳಲ್ಲಿರುವ ವಿಷಯಗಳ ವಿವರಣೆ (ಜ್ಯೋತಿಷ್ಯ-ಭವಿಷ್ಯ, ಶಿಲ್ಪ, ವಾಸ್ತು, ವೈದ್ಯ, ಇತಿಹಾಸ, ಅರ್ಥಶಾಸ್ತ್ರ, ವಾಣಿಜ್ಯ, ಶಿಕ್ಷಣ, ಸಂಗೀತ ಇತ್ಯಾದಿ) ಯಾವುದೇ ವಿಷಯದ ಬಗ್ಗೆ ನಿರ್ದಿಷ್ಟ ಹಸ್ತಪ್ರತಿಯ ಆಧಾರದಿಂದ ವಿವರಣೆ.
8. ಹಸ್ತಪ್ರತಿಯ ಪಠ್ಯದಲ್ಲಿರುವ ಭಾಷೆ, ಲಿಪಿಕಾರರು, ಸಾಮಾಜಿಕ-ಸಾಂಸ್ಕೃತಿಕ ಸಂಗತಿಗಳು, ಇತ್ಯಾದಿ ಅಂಶಗಳ ಅಧ್ಯಯನ.
9. ಪ್ರಾಚೀನ ಸಾಹಿತ್ಯ ಗ್ರಂಥಗಳಲ್ಲಿ ಮುದ್ರಿತವಾಗಿರುವ ಪಠ್ಯಗಳನ್ನು, ಪಾಠಾಂತರಗಳನ್ನು ಹಸ್ತಪ್ರತಿಯ ಪಠ್ಯಗಳೊಂದಿಗೆ ತೌಲನಿಕ ಅಧ್ಯಯನ.
10. ಮುದ್ರಿತ ಪಾಠಗಳಿಗಿಂತ ಭಿನ್ನವಾದ ಹಸ್ತಪ್ರತಿ ಪಾಠಗಳನ್ನು ಗುರುತಿಸುವುದು.
11. ಹಸ್ತಪ್ರತಿಯೊಂದರಲ್ಲಿರುವ ಸಂಗತಿಗಳಿಂದ ಇತಿಹಾಸ ಪುನರ್ರಚನೆ.
12. ಹಸ್ತಪ್ರತಿ ಪುಷ್ಪಿಕೆಗಳಿಂದ ಸಾಂಸ್ಕೃತಿಕ ಅಧ್ಯಯನದ ಅಂಶಗಳು.
13. ಹಸ್ತಪ್ರತಿಯಲ್ಲಿರುವ ವಿಷಯಗಳಿಂದ ಸಾಮಾಜಿಕ ಅಧ್ಯಯನದ ಅಂಶಗಳು.
14. ಚಿತ್ರಕಲೆ, ವಾಸ್ತು, ಆಯುರ್ವೇದ, ಪ್ರಾಣಿವೈದ್ಯ (ಗಜಶಾಸ್ತ್ರ, ಅಶ್ವಶಾಸ್ತ್ರ, ಪಶುಶಾಸ್ತ್ರ ಇತ್ಯಾದಿ) ಮಾನವ ವೈದ್ಯ. ಧರ್ಮ, ಸಾಹಿತ್ಯ, ಸಂಸ್ಕೃತಿ ಇತ್ಯಾದಿ ವಿವಿಧ ಶಿಸ್ತುಗಳ ಹಸ್ತಪ್ರತಿಗಳನ್ನು ಪರಿಚಯಿಸುವುದು.
15. ಗ್ರಂಥ ಸಂಪಾದನೆಯ ಪರಿಭಾಷೆಯಲ್ಲಿ ಭಿನ್ನ ಚಿಂತನೆಗಳನ್ನು ಕುರಿತ ಹಸ್ತಪ್ರತಿ ಆಧಾರಿತ ವಿಚಾರಗಳು.

ಒಟ್ಟಾರೆ ಹಸ್ತಪ್ರತಿಯೊಂದನ್ನು ಅದರ ಎಲ್ಲ ಮುಖಗಳಿಂದ ಚರ್ಚೆಗೆ ಒಳಪಡಿಸುವಂತಹ ಯಾವುದೇ ವಿಚಾರವಾದರೂ ಆಗಬಹುದು.
ಸಹಾಯ ಸಹಕಾರಗಳನ್ನು ನಿರೀಕ್ಷಿಸುತ್ತ
ವಂದನೆಗಳೊಂದಿಗೆ


ದ್ವಿತೀಯ ಸಮಾವೇಶ ದಿನಾಂಕ 18-3-2012ರಂದು ರಾಮಚಂದ್ರಪುರದಲ್ಲಿ ನಡೆಯಲಿದೆ. ಆಸಕ್ತರಿಗೆ ಸುಸ್ವಾಗತ

ತಮ್ಮ ವಿಶ್ವಾಸಿ

(ಡಾ॥ ನಾ. ಗೀತಾಚಾರ್ಯ)
ಗೌ॥ ಕಾರ್ಯದರ್ಶಿ

ದೂರವಾಣಿ : ೨೬೬೧೫೮೭೭, ೨೬೬೭೬೭೭೩
ಇ-ಮೇಲ್ : bmsritrust@gmail.com

ಪುಸ್ತಕ ಪರಿಚಯ



ಭಾವ ರಾಗ ಶಿಲ್ಪ

(೧೦೮ ಕವನಗಳಿಗೆ ರಾಗ ಸಂಯೋಜನೆ ಮತ್ತು ಸ್ವರ ಪ್ರಸ್ತಾರ)

ಲೇಖಕರು: ಆರ್. ರಮಾದೇವಿ

ಪ್ರಕಟಣೆ : **ಚಂದನ ಪ್ರಕಾಶನ,** ಬೆಂಗಳೂರು.

ಮುದ್ರಣ : ೨೦೧೧

ಪುಟಗಳು ೨೭೨+೧೬ **ಬೆಲೆ : ರೂ. ೪೦೦/-**

ಮುನ್ನುಡಿ ಬರೆದಿರುವ ಖ್ಯಾತ ಸಂಗೀತ ವಿದ್ವಾಂಸರಾದ ಡಾ. ಆರ್. ಕೆ. ಶ್ರೀಕಂಠನ್ ಶ್ರೀಮತಿ ರಮಾದೇವಿಯವರು ಕವನಗಳ ಭಾವವನ್ನು ಅರಿತು ಅದಕ್ಕನುಗುಣವಾಗಿ ರಾಗ ನಿರ್ದೇಶನ ಮತ್ತು ಸ್ವರ ಸಂಯೋಜನೆ ಮಾಡುವುದರಲ್ಲಿ ಯಶಸ್ವಿಯಾಗಿದ್ದಾರೆ! ಎಂದು ಪ್ರಶಂಸಿದ್ದರೆ, 'ಎರಡು ಮಾತು' ಬರೆದಿರುವ ಕನ್ನಡದ ಹಿರಿಯ ಖ್ಯಾತ ಸಾಹಿತಿ ಡಾ. ಜಿ.ಎಸ್. ಶಿವರುದ್ರಪ್ಪ ಅವರು ರಮಾದೇವಿಯವರು ಸಿದ್ಧಪಡಿಸಿರುವಂಥ, ಸ್ವರ ಸಂಯೋಜನೆ ಹಾಗೂ ಸ್ವರ ಪ್ರಸ್ತಾರದ ಸಂಪುಟವು ಸುಗಮ ಸಂಗೀತದ ವಿವಿಧ ಶೈಲಿಗಳನ್ನು ಪರಿಚಯಿಸುತ್ತ, ಸುಗಮ ಸಂಗೀತ ಪರಂಪರೆಯನ್ನು ಮುಂದುವರಿಸುವ ಸ್ವರೂಪದ್ದಾಗಿದೆ ಎನ್ನುವುದರಲ್ಲಿ ಸಂದೇಹವಿಲ್ಲ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಹೀಗೆಯೇ ಈ ಕೃತಿ ಡಾ. ಕೆ. ಎಸ್. ನಿಸಾರ್ ಅಹಮದ್ ಹಾಗೂ ಎ. ಸುಂದರ ಮೂರ್ತಿಯವರೂ ಈ ಕೃತಿಯ ಬಗ್ಗೆ ಮೆಚ್ಚುಗೆ ಸೂಚಿಸಿದ್ದಾರೆ. ಇದು ಎಲ್ಲಾ ಗ್ರಂಥಾಲಯಗಳಲ್ಲಿ ಹಾಗೂ ಸಂಗೀತಗಾರರುಗಳ ಮನೆಯಲ್ಲಿ ಇಡಲೇಬೇಕಾದ ಕೃತಿ ಎಂಬುದರಲ್ಲಿ ಸಂದೇಹವಿಲ್ಲ.

ಛೆ! ಇದೆಂತಾ ಪ್ರಜಾಪ್ರಭುತ್ವ


(ಪ್ರಜಾಪ್ರಭುತ್ವ ಕುರಿತ ಗ್ರಂಥ)

ಲೇಖಕರು : ಶಾಂತರಾಮ ಸೋಮಯಾಜಿ.

ಪ್ರಕಾಶಕರು : **ಶ್ರೀನಿವಾಸ ಪುಸ್ತಕ ಪ್ರಕಾಶನ,** ೧೬೪/ಎ, ಮೊದಲನೇ ಮಹಡಿ, ಎಂ. ಆರ್. ಎನ್. ಬಿಲ್ಡಿಂಗ್, ಕನಕಪುರ ಮುಖ್ಯರಸ್ತೆ, ಬೆಂಗಳೂರು-೪.

ಮುದ್ರಣ : ೨೦೧೧

ಪುಟಗಳು : ೨೨೮+೪. **ಬೆಲೆ : ರೂ. ೧೨೦/-**



'ಪ್ರಜಾಪ್ರಭುತ್ವ' ಯಶಸ್ವಿಯಾಗಬೇಕಾದರೆ ಇದಕ್ಕೆ ಅವಶ್ಯಕವಾದ ಸಂವಿಧಾನದ ಪಾವಿತ್ರ್ಯತೆ, ಧಾರ್ಮಿಕ ಪ್ರಜ್ಞೆ ರಾಜಕೀಯ ವ್ಯಕ್ತಿಗಳ ರಾಷ್ಟ್ರನಿಷ್ಠೆ, ಶುದ್ಧ ಚಾರಿತ್ರಿಕ ಹಿನ್ನೆಲೆ, ಭ್ರಷ್ಟಾಚಾರದ ವಿರೋಧವಾದ ನಿಲುವು ಮುಂತಾದ ವುಗಳ ಬಗ್ಗೆ ಸುದೀರ್ಘ ಚರ್ಚೆ ನಡೆಸಿ, ತಮ್ಮ ಸ್ಪಷ್ಟ ಅಭಿಮತವನ್ನು ದಾಖಲಿಸಿದ್ದಾರೆ. ಈ ಬಗ್ಗೆ ಮಾನವೀಯ ಸಂವೇದನೆ, ವೈಚಾರಿಕ ನಿಲುವು ಮನೋಜ್ಞವಾಗಿ ರೂಪಿತವಾಗಿವೆ. ಪ್ರಜಾಪ್ರಭುತ್ವದಲ್ಲಿ ಕಾಳಜಿಯಿರುವ ಸರ್ವರೂ ಓದಲೇಬೇಕಾದ ಕೃತಿ.



ಉದ್ಯಮ ಕರ್ನಾಟಕ *(ಉದ್ಯಮಗಳ ಬಗ್ಗೆ ಮಾಹಿತಿ)*


ಲೇಖಕರು : ಶ್ರೀ ಕೆ. ಎನ್. ಭಗವಾನ್

ಪ್ರಕಾಶಕರು : ಕಾರ್ಮಿಕ ಲೋಕ, ಬೆಂಗಳೂರು.

ಮುದ್ರಣ : ೨೦೧೧.

ಪುಟಗಳು : ೧೮೪ **ಬೆಲೆ : ರೂ. ೧೩೦/-**

ಕರ್ನಾಟಕದಲ್ಲಿರುವ ಬಹುತೇಕ ಉದ್ಯಮಗಳ ಬಗ್ಗೆ ಖಚಿತ ಮಾಹಿತಿಯನ್ನು ನೀಡಿರುವ ಈ ಗ್ರಂಥ ಸರ್ವರಿಗೂ ಬಹು ಉಪಯುಕ್ತವಾಗಿದೆ. ಉದ್ಯೋಗ ಆರಂಭಿಸುವ ಆಸಕ್ತಿ ಇರುವವರಿಗೆ ಇದು ಅವಶ್ಯಕವಾಗಿ ಬೇಕಾಗುವ ಕೃತಿಯಾಗಿದೆ. ಹೆಚ್.ಎ.ಎಲ್.ನಲ್ಲಿ ಹಿರಿಯ ವ್ಯವಸ್ಥಾಪಕರಾಗಿದ್ದು ಪ್ರಸ್ತುತ ನಿವೃತ್ತ ಜೀವನ ನಡೆಸುತ್ತಿರುವ ಸಾಹಿತಿ ಶ್ರೀ ಕೆ. ಎನ್. ಭಗವಾನ್ ತಮ್ಮ ಕರ್ನಾಟಕದಲ್ಲಿರುವ ಉದ್ದಿಮೆಗಳ ಇತಿಹಾಸವನ್ನೇ ಸಂಗ್ರಹಿಸಿ ಓದುಗರಿಗೆ ನೀಡುವ ಮಹದುಪಕಾರ ಮಾಡಿರುತ್ತಾರೆ.



ಕರ್ನಾಟಕದ ವೈಜ್ಞಾನಿಕ ಸಂಶೋಧನಾ ಸಂಸ್ಥೆಗಳು:
(ಮಾಹಿತಿ ನೀಡುವ ಕೃತಿ)
ಲೇಖಕರು : ಶ್ರೀ ಬೆ. ಗೋ. ರಮೇಶ್.
ಪ್ರಕಾಶಕರು : ಉದಯಭಾನು ಕಲಾ ಸಂಘ, ಕೆಂಪೇಗೌಡನಗರ, ಬೆಂಗಳೂರು.
ಪುಟಗಳು : ೮+೫೬=೬೪ **ಬೆಲೆ : ರೂ. ೪೫/-**
ಪ್ರಕಟಣೆ : ೨೦೧೧.

ನಗರದ ಪ್ರಮುಖ ಕಲಾ ಸಂಘಗಳಲ್ಲಿ ಹೆಸರು ಗಳಿಸಿರುವ ಸಂಸ್ಥೆ, ಉದಯಭಾನು ಕಲಾ ಸಂಘ. ಇದು ಬಹುಮುಖ ಸೇವೆಯನ್ನು ಸಮಾಜಕ್ಕಲ್ಲದೆ, ಶೈಕ್ಷಣಿಕ ಕ್ಷೇತ್ರಕ್ಕೂ ಸಲ್ಲಿಸುತ್ತಿದೆ. ಇತ್ತೀಚೆಗೆ ಈ ಸಂಸ್ಥೆ ಪ್ರಾರಂಭಿಸಿರುವ ಉದಯಭಾನು ಉನ್ನತ ಅಧ್ಯಯನ ಕೇಂದ್ರ, ವಿದ್ಯಾರ್ಥಿಗಳಿಗಲ್ಲದೆ ಶಿಕ್ಷಕರಿಗೂ ಅನುಕೂಲವಾಗುವಂತಹ ಶಿಬಿರಗಳನ್ನು ನಡೆಸುತ್ತಿರುವುದಲ್ಲದೆ ಮೌಲಿಕ ಪುಸ್ತಕಗಳನ್ನೂ ಹೊರತರಲು ಮುಂದಾಗಿದೆ. ಈ ವಿಭಾಗದಡಿ ಇಂಜಿನಿಯರ್, ಸಾಹಿತಿ ಶ್ರೀ ಬೆ. ಗೋ. ರಮೇಶ್ ಕರ್ನಾಟಕದಲ್ಲಿರುವ ವೈಜ್ಞಾನಿಕ ಸಂಶೋಧನಾ ಸಂಸ್ಥೆಗಳ ಬಗ್ಗೆ ಖಚಿತ ಮಾಹಿತಿ ಸಂಗ್ರಹಿಸಿ ಈ ಗ್ರಂಥದಲ್ಲಿ ನೀಡಿ ಆಸಕ್ತ ಕನ್ನಡಿಗರಿಗೆ ಮಹದುಪಕಾರ ಮಾಡಿದ್ದಾರೆ. ಇದು ಬಹು ಉಪಯುಕ್ತ ಕೃತಿ. ಗ್ರಂಥಾಲಯಗಳಲ್ಲಲ್ಲದೆ ಎಲ್ಲರ ಮನೆಯಲ್ಲೂ ಇರಲೇಬೇಕಾದ ಕೃತಿಯೆಂದು ಹೇಳಬಹುದು.

ಅಭಿನಂದನೆಗಳು

೧. **ಅತ್ತಿಮಬ್ಬೆ ಪ್ರಶಸ್ತಿ :** (೨೦೦೯ ಮತ್ತು ೨೦೧೦) (ಸರ್ಕಾರಿ ಪ್ರಕಟಣೆ) ಸೃಜನಶೀಲ ಸಾಹಿತ್ಯ ಪ್ರಕಾರದಡಿ ಶ್ರೀಮತಿ ಶಾಂತಾದೇವಿ ಕಣವಿ (೨೦೦೯) ಅವರಿಗೆ ೨೦೧೦ನೇ ಸಾಲಿನ ಪ್ರಶಸ್ತಿ ಸೃಜನೇತರ ಕ್ಷೇತ್ರದಲ್ಲಿ ಶ್ರೀಮತಿ ಸುಧಾ ಮೂರ್ತಿಗಳಿಗೆ ಲಭಿಸಿವೆ.

೨. **ಕನಕಶ್ರೀ ಪ್ರಶಸ್ತಿ** (೨೦೦೯)ನೇ ಸಾಲಿನ ಪ್ರಶಸ್ತಿ ಡಾ. ಟಿ. ಎನ್. ನಾಗರತ್ನ ಅವರಿಗೆ, ೨೦೧೦ನೇ ಸಾಲಿನ ಪ್ರಶಸ್ತಿ ಡಾ. ಎಚ್.ಜೆ. ಲಕ್ಕಪ್ಪಗೌಡ ಮತ್ತು ಪ್ರೊ. ಜ್ಯೋತಿ ಹೊಸೂರ ಅವರಿಗೆ ಲಭಿಸಿದೆ.

೩. **ಗುಬ್ಬಿ ವೀರಣ್ಣ ಪ್ರಶಸ್ತಿ :** ೨೦೦೯ನೇ ಸಾಲಿನ ಪ್ರಶಸ್ತಿ ಶ್ರೀ ಪಿ. ವಜ್ರಪ್ಪ ಅವರಿಗೆ, ೨೦೧೦ನೇ ಸಾಲಿನ ಪ್ರಶಸ್ತಿ ಪ್ರಮೀಳಮ್ಮ ಗುಡೂರ ಅವರಿಗೆ ದೊರೆತಿದೆ.

೪. **ಗೌ॥ ಡಾಕ್ಟರೇಟ್** : ತುಮಕೂರು ವಿಶ್ವವಿದ್ಯಾನಿಲಯ ೧೨ ಜನ ಪ್ರತಿಭಾನ್ವಿತರಿಗೆ ಗೌರವ ಡಾಕ್ಟರೇಟ್ ನೀಡಿ ಪುರಸ್ಕರಿಸಿದೆ. (೧೧-೧೧-೨೦೧೧) ಪ್ರಮುಖ ರಾದವರು ಕವಿ/ಕಥೆಗಾರ ಶ್ರೀ ಜಯಂತ ಕಾಯ್ಕಿಣಿ. ಪತ್ರಕರ್ತ ಸಾಹಿತಿ ಶ್ರೀ ಬಾಬು ಕೃಷ್ಣಮೂರ್ತಿ; ಚಿಂತಕ ಪಾವಗಡ ಪ್ರಕಾಶ್‌ರಾವ್, ರಾಮಕೃಷ್ಣ ವಿವೇಕಾನಂದ ಆಶ್ರಮದ ಮುಖ್ಯಸ್ಥ ಶ್ರೀ ಶ್ರೀ ವೀರೇಶಾನಂದ ಸರಸ್ವತಿ ಸ್ವಾಮಿಜೀ ಮುಂತಾದವರು.

೫. **ಸರಸ್ವತಿ ಸಮ್ಮಾನ್** : (೨೦೧೦) ಖ್ಯಾತ ಸಾಹಿತಿ ಡಾ. ಎಸ್. ಎಲ್. ಭೈರಪ್ಪ ಅವರ 'ಮಂದ್ರ' ಕಾದಂಬರಿಗೆ ಈ ಪ್ರಶಸ್ತಿ ಸಂದಿದೆ. (ಇದು ಬಿರ್ಲಾ ಪ್ರತಿಷ್ಠಾನದ ಪ್ರತಿಷ್ಠಿತ ಪ್ರಶಸ್ತಿ ೭.೫. ಲಕ್ಷ ರೂ. ನಗದು ಮತ್ತು ಪ್ರಶಸ್ತಿ ಪದಕ ಒಳಗೊಂಡಿರುತ್ತಾರೆ.

೬. **ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರು** : ೭೮ನೇ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಖ್ಯಾತ ಹಿರಿಯ ಸಾಹಿತಿ ಡಾ. ಸಿ. ಪಿ. ಕೃಷ್ಣಕುಮಾರ್ ಅವರು ಆಯ್ಕೆಗೊಂಡಿದ್ದಾರೆ.

೭. **ಬಿ.ಎಂ.ಶ್ರೀ. ಪ್ರತಿಷ್ಠಾನದ ಗೌರವ ಅಧ್ಯಕ್ಷರು** : ನಾಡೋಜ ಡಾ. ಜಿ. ನಾರಾಯಣ ಅವರ ಮರಣದಿಂದ ತೆರವಾದ ಈ ಸ್ಥಾನಕ್ಕೆ ಖ್ಯಾತ ಸಾಹಿತಿ, ವಿಮರ್ಶಕ, ನಿವೃತ್ತ ಪ್ರಾಧ್ಯಾಪಕ ಪ್ರೊ. ಎಂ.ಎಚ್. ಕೃಷ್ಣಯ್ಯ ಅವರು ಆಯ್ಕೆಗೊಂಡು ೨೫-೧೨-೧೧ರಂದು ಅಧಿಕಾರ ವಹಿಸಿಕೊಂಡಿರುತ್ತಾರೆ.

೮. **ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ** : (೨೦೧೧) ಶ್ರೀ ಗೋಪಾಲ ಕೃಷ್ಣ ಪೈ ಅವರ 'ಸ್ವಪ್ನ ಸಾರಸ್ವತ' ಕಾದಂಬರಿಗೆ ಲಭಿಸಿದೆ. ಶ್ರೀರಾಮಚಂದ್ರ ಗುಹಾ (ಪ್ರಜಾವಾಣಿ ಅಂಕಣಕಾರ) ಅವರ ಕಥನ ಇತಿಹಾಸ 'ಇಂಡಿಯಾ ಆಫ್ಟರ್ ಗಾಂಧಿ' ಕೃತಿಗೆ ಲಭ್ಯವಾಗಿದೆ.

೯. **ಗೌ॥ ಡಾಕ್ಟರೇಟ್** : ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಯುಕ್ತರಾಗಿರುವ ಸಾಹಿತಿ ಶ್ರೀ ಮನು ಬಳಿಗಾರ್ ಅವರಿಗೆ ಕರ್ನಾಟಕ ವಿಶ್ವವಿದ್ಯಾನಿಲಯ ಗೌ॥ ಡಾಕ್ಟರೇಟ್ ನೀಡಿ ಪುರಸ್ಕರಿಸಿದೆ.

ಸಾದರ-ಸ್ವೀಕಾರ

೧. **ತೆರೆ ಮರೆಯ ಕನ್ನಡ ಕಲಿಗಳು** : (ಪರಿಚಯ ಗ್ರಂಥ). ಲೇಖಕರು : ಕೆ. ಎಚ್. ನರಸಿಂಹಮೂರ್ತಿ. ಪ್ರಕಾಶಕರು: ಕನ್ನಡ ಗೆಳೆಯರ ಬಳಗ. ೭, ರಾಘವೇಂದ್ರ ಕಾಂಪ್ಲೆಕ್ಸ್, ೨ನೇ ತಿರುವು, ಸಿ.ಕೆ.ಸಿ ಗಾರ್ಡನ್. ಬೆಂಗಳೂರು-೨೭. ಬೆಲೆ : ರೂ. ೭೫/-. ಪುಟಗಳು : ೧೦+೧೦೦. ಮುದ್ರಣ: ೨೦೧೧.

೨. **ಹಿಂದಿ ಹೇರಿಕೆ** : (ಭಾಷಾ ನೀತಿ). ಲೇಖಕರು : ಆನಂದ್ ಜಿ. ಪ್ರಕಾಶಕರು : ಬನವಾಸಿ ಬಳಗ, ೩೨/೨೯, 'ಪವನ ನಿಲಯ', ಮೊದಲನೇ ಮಹಡಿ, ಮೊದಲನೇ ಅಡ್ಡರಸ್ತೆ, ಟಾಟಾ ಸಿಲ್ಕ್ ಫಾರಂ. ಓಬಳಪ್ಪ ಗಾರ್ಡನ್, ಬೆಂಗಳೂರು-೨೦, ಪುಟಗಳು : ೨೯೨, ಮುದ್ರಣ : ೨೦೧೧. ಬೆಲೆ: ರೂ. ೧೫೦/-

೩. **ಬೀದರ ಜಿಲ್ಲೆಯ ಜೈನ ಶಾಸನಗಳು** : ಲೇಖಕರು : ಡಾ. ಅಪ್ಪಣ್ಣ ಎನ್. ಹಂಚೆ, ಪ್ರಕಾಶಕರು : ವಿದ್ಯಾಶ್ರೀ ಪ್ರಕಾಶನ, ಗದಗ-೫೮೨೧೦೧. ಪುಟಗಳು : ೧೮+೧೨೨. ಬೆಲೆ : ರೂ. ೧೨೫/-. ಮುದ್ರಣ ೨೦೧೧.

೪. **ಓದಿ-ಓದಿಸಿ-೧.೨** : ಲೇಖಕರು : ವಿದ್ವಾನ್ ಜಿ. ಚನ್ನವೀರಸ್ವಾಮಿ, ವಿದ್ವಾನ್ ಡಾ. ಎಸ್. ಪ್ರಭುಲಿಂಗ ದೇವರು. ಪ್ರಕಾಶಕರು : ಭಾಗ್ಯಶ್ರೀ ಪ್ರಕಾಶನ, ೮೬ನೇ ಅಡ್ಡರಸ್ತೆ ೩ನೇ ಮುಖ್ಯರಸ್ತೆ, ಹನುಮಂತನಗರ, ಬೆಂಗಳೂರು-೧೯ ಪುಟಗಳು : ೧೬, ೧೬. ಬೆಲೆ : ರೂ. ೮/-ಮುದ್ರಣ ೨೦೧೧.

೫. **ಕೆರೆಗಳು ಬತ್ತಿದಾಗ ಜಲ ಸಮಸ್ಯೆ** : ಲೇಖಕರು : ಟಿ. ಆರ್. ಅನಂತರಾಮು, ಪ್ರಕಾಶಕರು : ಉದಯಭಾನು ಕಲಾ ಸಂಘ (ರಿ.) ಕೆಂಪೇಗೌಡ ನಗರ, ಬೆಂಗಳೂರು-೧೯. ಪುಟಗಳು : ೧೨+೫೨ ಬೆಲೆ : ರೂ. ೪೫/- ಪ್ರಕಟಣೆ : ೨೦೧೦.

೬. **ಅಮರ್ತ್ಯಸೇನ್** : ಲೇಖಕರು : ಡಾ. ಆರ್. ಕೋಮಲ, ಡಾ. ಶುಭ ರಮೇಶ್, ಪ್ರಕಾಶಕರು : ಉದಯಭಾನು ಕಲಾ ಸಂಘ (ರಿ.) ಕೆಂಪೇಗೌಡ ನಗರ, ಬೆಂಗಳೂರು-೧೯, ಮುದ್ರಣ : ೨೦೧೦. ಪುಟಗಳು. ೧೬+೬೦. ಬೆಲೆ : ರೂ. ೪೫/-

೭. **ಮಣ್ಣಿಂದ ಕಾಯ** : (ದಾಸ ಸಾಹಿತ್ಯ ಮೀಮಾಂಸೆ) : ಲೇಖಕರು : ಡಾ. ಎಚ್. ಎನ್. ಮುರಳೀಧರ. ಪ್ರಕಾಶನ ಉದಯಭಾನು ಕಲಾ ಸಂಘ (ರಿ.) ಕೆಂಪೇಗೌಡನಗರ, ಬೆಂಗಳೂರು-೧೯, ಮುದ್ರಣ : ೨೦೧೧. ಪುಟಗಳು : ೮+೪೮. ಬೆಲೆ : ರೂ. ೪೫/-

೮. **ತನ್ಮಯಿ** : (ಸಾಮಾಜಿಕ ಕಾದಂಬರಿ) ಲೇಖಕರು : ಪ್ರೊ. ಬಿ. ನಾರಾಯಣಮ್ಮ. ಪ್ರಕಾಶಕರು : ರಜತಾದ್ರಿ ಪ್ರಕಾಶನ. ನಂ. ೬೧, ೧೦ನೇ ಎ ಅಡ್ಡರಸ್ತೆ, ಪಶ್ಚಿಮ ಕಾರ್ಡ್‌ರಸ್ತೆ, ಬೆಂಗಳೂರು-೮೬. ಮುದ್ರಣ: ೨೦೦೮. ಬೆಲೆ : ರೂ. ೭೦/-


೯. **ಸೇವಕಿ** : (ಕಾದಂಬರಿ). ಲೇಖಕಿ : ಡಾ. ಎಸ್. ವ್ಹಿ. ಪ್ರಭಾವತಿ. ಪ್ರಕಾಶಕರು : ಶ್ರೀ ಸಿದ್ಧಲಿಂಗೇಶ್ವರ ಬುಕ್ ಡಿಪೋ ಮತ್ತು ಪ್ರಕಾಶನ. ಮುಖ್ಯಬೀದಿ, ಗುಲಬುರ್ಗಾ-೫೮೫ ೧೦೧. ಮುದ್ರಣ. ಪುಟಗಳು ೧೬೦. ಬೆಲೆ : ರೂ. ೧೧೦/-.

೧೦. **ಬಯಲು ಬಾನು** : (ಕಾದಂಬರಿ) ಲೇಖಕರು : ಹಣವಂತ ತಾಸಗಾಂವಕರ. ಪ್ರಕಾಶಕರು : ಕಲಾ ಪ್ರಕಾಶನ : ನಂ. ೨ ೨ನೇ ಅಡ್ಡರಸ್ತೆ, ಮುನೇಶ್ವರ ಬ್ಲಾಕ್, ರಾಜಮಹಲ್, ಗುಟ್ಟಹಳ್ಳಿ, ಬೆಂಗಳೂರು-೩, ಮುದ್ರಣ : ೨೦೧೦ ಬೆಲೆ: ರೂ. ೭೫/- ಪುಟಗಳು : ೧೦೪.

ಶ್ರದ್ಧಾಂಜಲಿ

ನಾಡೋಜ ಡಾ॥ ಜಿ. ನಾರಾಯಣ

ಜೀವಿತ ಕಾಲ : ೨-೯-೧೯೨೩ ರಿಂದ ೨೦-೧೧-೨೦೧೧



ಖ್ಯಾತ ಗಾಂಧಿವಾದಿ, ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ **ಗೌ॥ ಅಧ್ಯಕ್ಷರಾಗಿದ್ದ ನಾಡೋಜ ಡಾ॥ ಜಿ. ನಾರಾಯಣ** ಅವರು ಹೃದಯಾಘಾತದಿಂದ ದಿನಾಂಕ: ೨೦-೧೧-೨೦೧೧ರಂದು ನಿಧನ ಹೊಂದಿದರು.

ಅಜಾತಶತ್ರು, ನಿಷ್ಕಾಮ ಕರ್ಮ ಯೋಗಿ, ಗಾಂಧಿತತ್ವ ಪ್ರತಿಪಾದಕ ಎಂದೆಲ್ಲಾ ಖ್ಯಾತರಾಗಿದ್ದ ನಾಡೋಜ ಡಾ. ದೇಶಹಳ್ಳಿ ಜಿ. ನಾರಾಯಣ ಕರ್ನಾಟಕ ಕಂಡ ಅಪೂರ್ವ ವ್ಯಕ್ತಿತ್ವದವರು ಈ ಕಟ್ಟಾ ಕನ್ನಡಾಭಿಮಾನಿ, ಕನ್ನಡ ನಾಡು-ನುಡಿಯ ಸೇವೆಗಾಗಿಯೇ ತಮ್ಮ ಜೀವಿತವನ್ನೆ ಶ್ರೀಗಂಧದ ಕೊರಡಿನಂತೆ ತೇಯ್ದರು, ಆದರ್ಶ ಕ್ಕಾಗಿಯೇ ಬಾಳಿದ ಈ ಹಿರಿಯ ಚೇತನ ಕನ್ನಡ ನಾಡಿನಲ್ಲಿ ಎಂದೂ ಅಮರ. ಇವರು ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನದ ಸ್ಥಾಪನೆಗೆ ಪ್ರೊ. ಎಂ. ವಿ. ಸೀತಾರಾಮಯ್ಯ ಅವರ ಜೊತೆಗೆ ಪ್ರಾರಂಭದಿಂದಲೂ ಶ್ರಮಿಸಿದವರು. ಸಂಸ್ಥೆ ಇಂದಿನ ಸುಸ್ಥಿತಿಗೆ ತಲುಪಲು ಅವರು ಸ್ತುತ್ಯರ್ಹರು. ಅಪಾರ ಕೊಡುಗೆ ನೀಡಿರುತ್ತಾರೆ. ಪ್ರತಿಷ್ಠಾನದ ಹಿತದೃಷ್ಟಿಯಿಂದ ಕೆಲಕಾಲ ಗೌರವಾಧ್ಯಕ್ಷರ ಜೊತೆಗೆ ಪ್ರತಿಷ್ಠಾನದ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ ಹೆಗ್ಗಳಿಕೆ ಇವರದು. ಇವರು ನಿರ್ವಹಿಸಿದ ಪ್ರತಿಷ್ಠಿತ ಹುದ್ದೆಗಳು ಅಪಾರ. ಮುಖ್ಯವಾದವು ಬೆಂಗಳೂರು ನಗರ ಸಭೆಯ ಮೇಯರ್, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷಗಿರಿ (ಸುಮಾರು ೯ ವರ್ಷ). ಕರ್ನಾಟಕ ಗಮಕ ಕಲಾ ಪರಿಷತ್ತಿನ ಅಧ್ಯಕ್ಷತೆ (೨೦ ವರ್ಷ) ಪತ್ರಿಕಾ ಅಕಾಡೆಮಿ ಹಾಗೂ ಕನ್ನಡ ಅಭಿವೃದ್ಧಿ ಪ್ರಾಧಿಕಾರಗಳ ಅಧ್ಯಕ್ಷತೆ, ಕರ್ನಾಟಕ ಜಾನಪದ ಪರಿಷತ್ತಿನ ಅಧ್ಯಕ್ಷತೆ; ಮುಂತಾದ ಪ್ರತಿಷ್ಠಿತ ಸಂಸ್ಥೆಗಳನ್ನು ಪ್ರಗತಿಯತ್ತ ಕೊಂಡೊಯ್ದಿದ್ದಾರೆ.

ಇವರಿಗೆ ಲಭಿಸಿರುವ ಮುಖ್ಯ ಪ್ರಶಸ್ತಿ ಪುರಸ್ಕಾರಗಳು: ರಾಜ್ಯೋತ್ಸವ ಪ್ರಶಸ್ತಿ, ಕೆಂಪೇಗೌಡ ಪ್ರಶಸ್ತಿ, ಹಂಪಿ ವಿಶ್ವವಿದ್ಯಾಲಯದ ನಾಡೋಜ ಪ್ರಶಸ್ತಿ, ಬೆಂಗಳೂರು ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಮುಂತಾದವು.

ಕನ್ನಡದ ಹಾಸ್ಯಪ್ರಧಾನ ಪತ್ರಿಕೆ 'ವಿನೋದ'ವನ್ನು ೧೯೫೧ ರಲ್ಲಿ ಸ್ಥಾಪಿಸಿ ನಿರಂತರ ನಡಿಸಿಕೊಂಡು ಬಂದ ಹೆಗ್ಗಳಿಕೆ ಇವರದು.

ಇವರು ರಚಿಸಿರುವ ಕೃತಿಗಳು : ಅಕ್ಷರವ ನೀವ್ ಕಲಿಯಿರಿ, ಮಲೇರಿಯಾ ಹಾವಳಿ, ರಾಷ್ಟ್ರೀಯ ಪದಗಳು, ಹೆಚ್ಚು ಬೆಳೆಯನ್ನು ಬೆಳೆಯಿರಿ, ನಾವು ಮತ್ತು ನಮ್ಮವರು, ಚಿಂತನ ಲಹರಿ ಮುಂತಾದವು.

ಇವರ ಆದರ್ಶ ಹಾಗೂ ನಿಸ್ಪೃಹ ಸೇವೆಗೆ ತಲೆಬಾಗುತ್ತಾ ಪ್ರತಿಷ್ಠಾನ ಇವರ ನಿಧನಕ್ಕೆ ಅಪಾರ ದುಃಖ ವ್ಯಕ್ತಪಡಿಸುತ್ತಾ, ಗೌರವಪೂರ್ಣ ಶ್ರದ್ಧಾಂಜಲಿಯನ್ನು ಅರ್ಪಿಸುತ್ತದೆ.

೦೮-೧೧-೨೦೧೧ ವಿಜ್ಞಾನ ಲೇಖಕ **ಶ್ರೀ ಪಿ. ಎನ್. ರಂಗನ್** (ಮನು) ಅವರು ಮೈಸೂರಿನಲ್ಲಿ ನಿಧನರಾದರು.

೧೨-೧೧-೨೦೧೧ ಖ್ಯಾತ ಲೇಖಕ, ಗಾಂಧಿ ಸ್ಮಾರಕ ನಿಧಿ, ಗಾಂಧಿಪೀಸ್ ಫೌಂಡೇಶನ್‌ಗಳಲ್ಲಿ ಕಾರ್ಯದರ್ಶಿ ಯಾಗಿದ್ದ **ಪ್ರೊ. ಹೆಚ್. ಆರ್. ದಾಸೇಗೌಡ** ಅವರು ಹೃದಯಾಘಾತದಿಂದ ನಿಧನರಾದರು.

೨೫-೧೧-೨೦೧೧ ಮಾಜಿ ಮುಖ್ಯಮಂತ್ರಿ **ಶ್ರೀ ಎಸ್. ಬಂಗಾರಪ್ಪ** (೭೯) ನಿಧನರಾದರು.

೨೫-೧೧-೨೦೧೧ ಪತ್ತೆದಾರಿ ಕಾದಂಬರಿಗಳ ಖ್ಯಾತ ಸಾಹಿತಿ **ಶ್ರೀ ಎನ್. ನರಸಿಂಹಯ್ಯ** (೮೭) ಕನ್ನಡದ 'ಶರ್ಲಾಕ್ ಹೋಂ' ಎಂದು ಪ್ರಸಿದ್ಧರಾಗಿದ್ದವರು ೫೫೦ಕ್ಕೂ ಹೆಚ್ಚು ಕಾದಂಬರಿಗಳನ್ನು ನೀಡಿರುತ್ತಾರೆ.

೨೯-೧-೨೦೧೨ ಖ್ಯಾತ ಸಾಹಿತಿ, ವಿಮರ್ಶಕ **ಡಾ. ಎಲ್. ಬಸವರಾಜು** (೯೩) ಮೈಸೂರಿನಲ್ಲಿ ನಿಧನರಾದರು.

ಈ ಮಹನೀಯರ ನಿಧನಕ್ಕೆ ಪ್ರತಿಷ್ಠಾನ ಶ್ರದ್ಧಾಂಜಲಿ ಅರ್ಪಿಸುತ್ತದೆ.

<u>ಅಚ್ಚಾದ ಪುಸ್ತಕ</u> ತೆರೆದ-ಅಂಚೆ

ಶ್ರೀಮತಿ/ಶ್ರೀ...

....

....

ವಿಳಾಸ
ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ
ಬಿ.ಎಂ.ಶ್ರೀ. ಕಲಾಭವನ, ೩ನೇ ಮುಖ್ಯರಸ್ತೆ
ನರಸಿಂಹರಾಜ ಕಾಲೋನಿ
ಬೆಂಗಳೂರು - ೧೯
ದೂರವಾಣಿ : ೨೬೬೧೫೮೭೭

ಮುದ್ರಕರು : ಇಳಾ ಮುದ್ರಣ, ನಂ. ೩೬, ೪೦ ಅಡಿ ರಸ್ತೆ, ರಾಘವನಗರ, ನ್ಯೂ ಟಿಂಬರ್‌ಯಾರ್ಡ್ ಲೇಔಟ್, ಬೆಂಗಳೂರು - ೨೬ ✆ : ೨೬೭೫೫೭೧೯೫
'ವಾರ್ತಾಪತ್ರ' ಪ್ರಾಯೋಜಕರು: ಇಳಾ ಮುದ್ರಣ, ಬೆಂಗಳೂರು-26.